ಶ್ರಿ ಎಚ್. ಎಂ. ಚನ್ನಬಸಪ್ಪ.—ಇದು ಬುದ್ಧಿಮತಿಕೆಯ ವಿಷಯ. ಒಂದು ಟಿ.ಎಂ.ಸಿ. ಎಫ್.ಟಿ. ಉಪಯೋಗ ಮಾಡಿಕೊಳ್ಳಬೇಕಾದರೆ, ಒಂದು ಎಕರೆಗೆ ಎಷ್ಟು ಹಣ ಖರ್ಚು ಬರುತ್ತದೆ ಎಂಬುದು ಇಲ್ಲಿ ಮುಖ್ಯವಾದ ವಿಷಯ. ಈಗ ಪೂರ್ವಕ್ಕೆ ಹರಿಯುವ ನದಿಗಳು ಏನಿವೆ, ಅವುಗಳ ನೀರನ್ನು ಉಪಯೋಗ ಮಾಡಿಕೊಳ್ಳಲು ಒಂದು ಎಕರೆಗೆ ಒಂದು ಸಾವಿರದಿಂದ ಎರಡು ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಅದೇ ಪಶ್ಚಿಮದ ಘಟ್ಟಗಳಲ್ಲಿ ಹುಟ್ಟುವ ನದಿಗಳ ನೀರನ್ನು ಪೂರ್ವಕ್ಕೆ ತಿರುಗಿಸಬೇಕಾದರೆ, ಕೆಲವು ಕಡೆಗಳಲ್ಲಿ ಸುರಂಗಗಳ ಮೂಲಕ ನೀರನ್ನು ಹರಿಸಬೇಕಾಗುತ್ತದೆ, ಜಲಾಶಯಗಳನ್ನು ಕಟ್ಟಬೇಕಾಗುತ್ತದೆ. ಅದಕ್ಕೆಲ್ಲಾ ಬಹಳ ಹಣ ಖರ್ಚಾಗುತ್ತದೆಯಾದ್ದರಿಂದ ಅದರ ಕಡೆಗೆ ಕೈಹಾಕಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಗಂಗಾ ನದಿಯ ನೀರನ್ನು ಕಾವೇರಿ ನದಿ ನೀರನ್ನು ಒಂದುಗೂಡಿಸ ಬೇಕೆಂದು ಹೊರಟಿರುವಾಗ ಈ ಕೆಲಸ ಕೈಕೊಳ್ಳುವುದು ಅಸಾಧ್ಯವೇ ?

ಶ್ರಿ ಎಚ್. ಎಂ. ಚನ್ನಬಸಪ್ಪ.—ಗಂಗಾ ನದಿಯ ನೀರನ್ನು ದಕ್ಷಿಣ ಭಾಗಕ್ಕೆ ತರತಕ್ಕಂಥದ್ದನ್ನು ನಾವು ಮತ್ತು ನೀವು ನಮ್ಮ ಗಳ ಜೀವಮಾನದಲ್ಲಿ ನೋಡುವುದಕ್ಕಾಗುವುದಿಲ್ಲ. ಅದು ಟೆಕ್ನಿಕಲ್ ಫೀಜಿಬಲ್. ಅದು ಅನೇಕ ರಾಜ್ಯಗಳಲ್ಲಿ ಹರಿದು ಬರಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಸಾವಿರದಿಂದ ಎರಡು ಸಾವಿರ ಅಡಿಗಳ ವರೆಗೆ ನೀರು ಹತ್ತಬೇಕಾಗುತ್ತದೆ. ಲೈನ್ ಸರ್ವೆ ಎಂದು ಏನು ಹೇಳುತ್ತೇವೆ, ಅದರ ಪ್ರಕಾರ ಕೆಲವು ನದಿಗಳ ನೀರನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಸಾಧ್ಯವಾಗುತ್ತದೆ, ಆದರೆ ಕೆಲವು ನದಿಗಳ ನೀರನ್ನು ತಿರುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಬಾರಾಪೋಲೆ ನದಿ ನೀರನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಕೆಲವು ನದಿಗಳಲ್ಲಿ ಇದು ಸಾಧ್ಯವಾಗುವುದಿಲ್ಲ. ಇನ್‌ವೆಸ್ಟಿಗೇಟ್ ಮಾಡಬೇಕಾದರೆ ಬಹಳ ಹಣ ಖರ್ಚಾಗುತ್ತದೆ. ಅದನ್ನು ಮಾಡುವ ಮುನ್ನ ಪೂರ್ವಕ್ಕೆ ಹರಿಯುವ ನದಿಗಳ ನೀರನ್ನು ಮೊದಲು ಉಪ ಯೋಗ ಮಾಡಿಕೊಂಡು ಆಮೇಲೆ ಇದನ್ನು ಯೋಜನೆ ಮಾಡಬೇಕಾಗುತ್ತದೆ.

RAISING THE TANK BUND AND WAIST WEIR OF MADAGADA TANK.

499. Sri K. YENKATAPPA (Shikaripur).—

Will the Minister for Public Works and Electricity be pleased to state :—

(*a*) the stage of the raising the level of Madagada tank bund and waist weir ;

(*b*) whether Government intends to give up this project and take up other lift irrigation scheme ;

(*c*) the extent of land and the number of villages that would be submerged due to raising the level of this waist weir and the extent of loss likely to be incurred ;

(*d*) since the extent of loss likely to be incurred would be more than the benefit whether the Government have thought of giving up this project ?

Sri H. M. CHANNABASAPPA (Minister for Public Works and Electricity).—

(*a*) the Project report prepared has been sent to C.W. and P.C. of Central Government. The sanction of the Central Government has not yet been received for this project.

(*b*) No.

(*c*) 1,446 acres of land and one village would be submerged. The loss likely to be incurred will be Rs. 8,64,000.

(ಶ್ರೀ ಹೆಚ್. ಎಂ. ಚನ್ನಬಸಪ್ಪ)

(*d*) As the benefit would be more than the loss, this question does not arise.

ಶ್ರೀ ಕೆ. ಯಂಕಟಪ್ಪ.—ಇದಕ್ಕೆ ಕೇಂದ್ರ ಸರ್ಕಾರದ ಮುಜೂರಾತಿ ದೊರಕಿಲ್ಲ ಎಂದು ಹೇಳಿದ್ದೀರಿ ಮತ್ತು ಈ ಯೋಜನೆಯನ್ನು ಬಿಟ್ಟು ಯಾತ ನೀರಾವರಿ ಯೋಜನೆಯನ್ನು ಕೈಕೊಳ್ಳುವ ಉದ್ದೇಶ ಸಹ ಇಲ್ಲ ಎಂದು ಹೇಳಿದ್ದೀರಿ. ಮದಗದ ಕೆರೆ ಏರಿ ಮತ್ತು ಕೋಡಿಯನ್ನು ಎತ್ತರಿಸುವುದರಿಂದ 1446 ಎಕರೆಗಳು ಮತ್ತು ಒಂದು ಹಳ್ಳಿ ಮುಳುಗಡೆ ಯಾಗುವುದರಿಂದ, ಅದನ್ನು ತಪ್ಪಿಸಲು ಯಾತ ನೀರಾವರಿ ಯೋಜನೆಯನ್ನು ಪರಕ್ಕೆ ಕೈಕೊಳ್ಳಬಾರದು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಒಂದು ಜಲಾಶಯ ಕಟ್ಟಿದರೂ ಸಹ ಹಳ್ಳಿಗಳು ಮತ್ತು ಜಮೀನುಗಳು ಮುಳುಗಡೆಯಾಗುತ್ತವೆ. ಯಾತಾ ನೀರಾವರಿ ಯೋಜನೆಗೆ ಖರ್ಚು ಹೆಚ್ಚಾಗುತ್ತದೆ. ಆದ್ದರಿಂದ ಹರಿಯುವ ನೀರನ್ನು ಮೊದಲು ವ್ಯವಸಾಯಕ್ಕೆ ಉಪಯೋಗಿಸಿಕೊಂಡು ಇನ್ನೂ ಹೆಚ್ಚಿನ ನೀರು ಉಳಿದಿದೆ ಎಂದು ಕಂಡುಬಂದಾಗ ಯಾತ ನೀರಾವರಿ ಯೋಜನೆಯನ್ನು ಕೈಕೊಳ್ಳುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಈಗಿರುವ ಆಣಕಟ್ಟಿಗೆ ಮಳೆಗಾಲದಲ್ಲಿ ಹೆಚ್ಚು ನೀರು ಬಂದರೆ ಶಿಕಾರಿಪುರ ಮತ್ತು ಶಿರಾಳಕೊಪ್ಪ ಇವೆರಡರ ಮಧ್ಯೆಯಿರುವ ರಸ್ತೆ ಕಟ್ ಆಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರ ಜೊತೆಗೆ ಈ ಕೆರೆ ಏರಿ ಮತ್ತು ಕೋಡಿಯನ್ನು ಮತ್ತೆ ಎತ್ತರಿಸಿದರೆ ಆ ಭಾಗದ ವಾಹನಗಳ ಸೌಕರ್ಯವೆಲ್ಲ ಬಂದ್ ಆಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಾವರಿ ಯೋಜನೆಗಳ ಕೆಲಸ ಕೈಕೊಂಡಾಗ ಮಾರ್ಗಗಳು, ಹಳ್ಳಿಗಳು ಮತ್ತು ಜಮೀನುಗಳು ಮುಳುಗಡೆಯಾಗುತ್ತವೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಂತಹ ಸಂದರ್ಭಗಳಲ್ಲಿ ಆ ಯೋಜನೆಗಳಿಂದ ಅನುಕೂಲತೆ ಎಷ್ಟು, ಅನಾನುಕೂಲತೆ ಎಷ್ಟು ಎಂಬುದನ್ನು ನೋಡಲಾಗುತ್ತದೆ. ಅನುಕೂಲ ಹೆಚ್ಚಿದ್ದರೆ, ಅನಾನುಕೂಲ ಉಂಟಾದರೂ ಸಹ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಈಗ ಈ ಕೆರೆಯಿಂದ ನೀರು ಪಾಣಿವಿಲಾಸ ಸಾಗರಕ್ಕೆ ಹರಿದು ಬರುತ್ತಿದೆ. ಈ ಕೆರೆಯ ಏರಿ ಮತ್ತು ಕೋಡಿಯನ್ನು ಏನಾದರು ಎತ್ತರಿಸಿದರೆ ಪಾಣಿವಿಲಾಸ ಸಾಗರಕ್ಕೆ ಬರುವ ನೀರಿಗೆ ತೊಂದರೆಯಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಇಲ್ಲಿ ಕೋಡಿ ಎತ್ತರಿಸುವ ವಿಷಯ ಕೇಳಿದ್ದಾರೆ; ಈ ಮಾನ್ಯ ಸದಸ್ಯರು ಪಾಣಿವಿಲಾಸಸಾಗರದ ವಿಷಯ ಕೇಳುತ್ತಿದ್ದಾರೆ. ಈ ಯೋಜನೆಯನ್ನು ಕೈಕೊಳ್ಳುವಾಗ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಲಾಗುತ್ತದೆ. ಈ ಯೋಜನೆಯನ್ನು ಕೈಕೊಂಡರೆ 1446 ಎಕರೆಗಳು ಮತ್ತು ಒಂದು ಹಳ್ಳಿ ಮುಳುಗಡೆಯಾಗುತ್ತದೆಂದು ಪರಿಣತರಿಂದ ವರದಿ ಬಂದಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಪ್ರಾಜೆಕ್ಟ್ ರಿಪೋರ್ಟನ್ನು ಕೇಂದ್ರಕ್ಕೆ ಯಾವಾಗ ಕಳಿಸಿಕೊಡಲಾಯಿತು ಮತ್ತು ಇದನ್ನು ಎಷ್ಟು ದಿವಸಗಳಲ್ಲಿ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾ॥ 5–7–1971ರಲ್ಲಿ ಕಳಿಸಿಕೊಟ್ಟಿದ್ದೇವೆ. ಅವರ ಪರಿತೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಯಂಕಟಪ್ಪ.—ಯಾತ ನೀರಾವರಿಗೆ ಹೆಚ್ಚು ಖರ್ಚು ಬರುತ್ತದೆಂದು ಹೇಳಿದಿರಿ. ಈ ಕೆರೆಯ ಏರಿ ಮತ್ತು ಕೋಡಿಯನ್ನು ಹೆಚ್ಚಿಸುವುದರಿಂದ ಫಲವತ್ತಾದ ಭೂಮಿ ಮುಳುಗಡೆಯಾಗುವುದರಿಂದ, ಇದನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರ ಜಮೀನು ಮುಳುಗಡೆಯಾಗುತ್ತದೋ. ಅಂತಹವರು ಇದನ್ನೇ ಹೇಳುವುದು. ನಾನು ಹೋದಲೇ ಹೇಳಿದಂತೆ ಯಾವುದಾದರು ಜಲಾಶಯ ನಿರ್ಮಾಣ ಮಾಡುವಾಗ ಅದರಿಂದ ಅನುಕೂಲ ಎಷ್ಟು, ಅನಾನುಕೂಲ ಎಷ್ಟು ಎಂಬುದನ್ನು ನೋಡಿಕೊಂಡು, ಅನುಕೂಲ ಹೆಚ್ಚಾಗಿದ್ದರೆ ಅದನ್ನು ಮಾಡಬೇಕಾಗಿ ಬರುತ್ತದೆ. ಆದಕಾರಣ ತಾವು ಹೇಳಿದಂಥ ಅಂಶ ಇಲ್ಲಿ ಉದ್ಭವವಾಗುವುದಿಲ್ಲ.